ಪ್ರಶ್ನೆಯಲ್ಲಿ ಕೇಳಿದ್ದೇನೆ, ಅಷ್ಟೂ ಕೆಲಸವನ್ನು ಸಮರ್ಪಕವಾಗಿ ಮಾಡುತ್ತೀರಾ? ಯಾವಾಗ ಮಾಡುತ್ತೀರಿ? ಅದರ ಬಗ್ಗೆ ಹೇಳಿದರೆ ಸಾಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಸುಣ್ಣ, ಬಣ್ಣ ಹಚ್ಚುವಂಥ ಕೆಲಸ ಈಗಾಗಲೇ ಪ್ರಾರಂಭ ಮಾಡಿದೆ. ಶೀಘ್ರದಲ್ಲೇ ಮುಗಿಸುತ್ತಾರೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ರಾಜ್ಯದಲ್ಲಿ ಒಟ್ಟು ಎಷ್ಟು ಪ್ರವಾಸಿ ಮಂದಿರಗಳು ಮತ್ತು ಸರ್ಕ್ಯುಟ್ ಹೌಸ್‌ಗಳು ಇವೆ? ಕಳೆದ ವರ್ಷ ದುರಸ್ತಿ ನವೀಕರಣಕ್ಕಾಗಿ ಎಷ್ಟು ಹಣವನ್ನು ತಾವು ವೆಚ್ಚ ಮಾಡಿದ್ದೀರಿ? ಈ ವರ್ಷ ಎಷ್ಟು ಹಣ ವೆಚ್ಚ ಮಾಡುತ್ತೀರಿ ಎಂದು ಇದರ ಬಗ್ಗೆ ನಿಖರವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಜನರಲ್ ಕೊಶ್ಚನ್ ಕೇಳಿ ಆಮೇಲೆ ಸ್ಪೆಸಿಫಿಕ್ ಆಗಿ ಕೇಳಿದರೆ ಪರವಾಗಿಲ್ಲ. ನೀವು ಮೊದಲು ಬೆಳಗಾಮ್‌ನದ್ದು ಕೇಳಿಬಿಟ್ಟು ಈಗ ರಾಜ್ಯದ್ದೆಲ್ಲಾ ಕೇಳುತ್ತಿದ್ದೀರಿ. ಅವರ ಹತ್ತಿರ ಡಿಟೇಲ್ಸ್ ಎಲ್ಲಿ ಇರುತ್ತದೆ?

ಶ್ರೀ ಎಂ. ಸಿ. ಉದಾಸಿ : ಮಾಹಿತಿಯನ್ನು ತರಿಸಿ ಕೊಡಲಾಗುವುದು.

ಬಾರ್ ಅಸೋಷಿಯೇಷನ್ ಅಭಿವೃದ್ಧಿಪಡಿಸುವ ಕುರಿತು

379- ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ಬಾರ್ ಅಸೋಸಿಯೇಷನ್‌ಗಳಿವೆ?*

ಆ) *ವಕೀಲರ ಗುಣಮಟ್ಟವನ್ನು ಕಾಪಾಡಲು ಈ ಬಾರ್ ಅಸೋಸಿಯೇಷನ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು) :

ಅ) 160 ಬಾರ್ ಅಸೋಸಿಯೇಷನ್‌ಗಳಿವೆ.

ಆ) ಬಾರ್ ಅಸೋಸಿಯೇಷನ್‌ಗಳನ್ನು ಹಾಗೂ ವಕೀಲರುಗಳ ವಕೀಲಿ ವೃತ್ತಿಯ ಗುಣಮಟ್ಟ ಅಭಿವೃದ್ಧಿ ಪಡಿಸಲು ಈ ಕೆಳಕಂಡ ಯೋಜನೆಗಳನ್ನು ಸರ್ಕಾರವು ರೂಪಿಸಿದೆ.

1. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬಾರ್ ಅಸೋಸಿಯೇಷನ್‌ಗಳು ಸೆಮಿನಾರ್ ಮತ್ತು ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ.

2. ವಕೀಲರುಗಳ ಸಂಘಗಳಿಗೆ ವೃತ್ತಿಗೆ ಸಂಬಂಧಪಟ್ಟ ಪುಸ್ತಕ ಹಾಗೂ ಪೀಠೋಪಕರಣಗಳನ್ನು

ಖರೀದಿಸಲು ಸಾಕಷ್ಟು ಹಣವನ್ನು ಸಹಾಯಾನುಧನ ರೂಪದಲ್ಲಿ ನೀಡಲಾಗುತ್ತದೆ. ಇತ್ತೀಚೆಗೆ ಈ ಮೊತ್ತವನ್ನು ಹೆಚ್ಚಿಸಲಾಗಿದೆ.

3. ಕಾನೂನು ವಿದ್ಯಾರ್ಥಿಗಳಿಗೆ ಒಂದು ವರ್ಷದ ವೃತ್ತಿ ತರಬೇತಿಯನ್ನು ಕಡ್ಡಾಯ ಗೊಳಿಸಲಾಗಿದೆ.

4. ಕಾನೂನು ಪದವಿಯ ಅವಧಿಯನ್ನು ಪದವೀಧರರುಗಳಿಗೆ 2 ವರ್ಷದಿಂದ ಮೂರು ವರ್ಷಗಳ ಅವಧಿಗೆ ಹೆಚ್ಚಿಸಿದ್ದು, ಪದವಿಪೂರ್ವ ವಿದ್ಯಾರ್ಥಿಗಳಿಗೆ ಈ ಅವಧಿಯನ್ನು 5 ವರ್ಷಗಳಿಗೆ ಸೀಮಿತಗೊಳಿಸಲಾಗಿದೆ.

5. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ.

6. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ : ಹಿಂದುಳಿದ : ಅಲ್ಪ ಸಂಖ್ಯಾತ ವರ್ಗ ಹಾಗೂ ಮಹಿಳಾ ವಕೀಲರುಗಳಿಗೆ ನಾಲ್ಕು ವರ್ಷಗಳ ಅವಧಿಗೆ ಸ್ಟೈಫಂಡ್‌ನ್ನು ನೀಡಲಾಗುತ್ತದೆ.

7. ವಕೀಲರ ಹಾಗೂ ಅವರ ಅವಲಂಬಿತರಿಗೆ ಆರ್ಥಿಕ ಸೌಲಭ್ಯ ಒದಗಿಸುವ ಸಲುವಾಗಿ ಸರ್ಕಾರವು ವಕೀಲರ ಕ್ಷೇಮಾಭಿವೃದ್ಧಿ ನಿಧಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ.

SRI S.P. MUDDAHANUMEGOWDA : The undisputed fact is standard of legal profession is being deteriorated. ಈಗ ಈ ಉದ್ದೇಶದಲ್ಲಿ ಮಾನ್ಯ ಕಾನೂನು ಸಚಿವರು ಈ ಬಗ್ಗೆ ಬಹುಶಃ ಚಿಂತನೆ ಮಾಡುತ್ತಾರೆ ಎಂದು ನಾನಂದುಕೊಂಡಿದ್ದೇನೆ. ಈಗ ತಾವು ಅದನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಏಳು ಕಾರ್ಯಕ್ರಮಗಳ ಪಟ್ಟಿಯನ್ನು ಕೊಟ್ಟಿದ್ದೀರಿ. ಎಲ್ಲಾ ಚೆನ್ನಾಗಿ ಇದೆ. ಆದರೆ ನನ್ನ ಅಪ್ರಹೆನ್‌ಶನ್ ಏನು ಎಂದರೆ ಇದು effective implementation ನಲ್ಲಿ ನಾವು ಸರಿಯಾಗಿ ಮಾಡುವುದಕ್ಕೆ ಆಗಿಲ್ಲ, ಇದು ಒಂದು. ಎರಡನೆಯದು, ಈ violation of professional ethics,- ಏನಿದೆ, ಇದು ಜಾಸ್ತಿಯಾಗುತ್ತಿದೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಮತ್ತೆ ಯುವ ವಕೀಲರಿಗೆ ಒಂದು ಟ್ರೈನಿಂಗ್ ಕೊಡತಕ್ಕಂಥಾದ್ದು - before joining the profession ಇದಕ್ಕೆ ಏನಾದರೂ ಸಿಟ್ಟಿಂಗ್ ಹೈಕೋರ್ಟ್ ಜಡ್ಜ್ ಅವರ ಚೇರ್‌ಮನ್‌ಶಿಪ್‌ನಲ್ಲಿ ಏನಾದರೂ ಒಂದು ಪ್ರಾಧಿಕಾರವನ್ನು ರಚನೆ ಮಾಡಿ ಸೂಪರ್‌ವಿಶನ್ ಮಾಡತಕ್ಕಂಥ ಯೋಜನೆ ಏನಾದರೂ ಹಾಕಿಕೊಂಡಿದ್ದೀರೋ?

11.50 ಎ.ಎಂ

ಎರಡನೆಯದು ನೀವೇನು ಆರ್ಥಿಕ ಅನುದಾನವನ್ನು ಹಿಂದುಳಿದ ವರ್ಗದವರು ಮತ್ತು ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಏನು ಕೊಡುತ್ತಿದ್ದೀರಿ, ಅದನ್ನು ಆರ್ಥಿಕವಾಗಿ ಹಿಂದುಳಿದ ಎಲ್ಲಾ ವಕೀಲರಿಗೂ ಕೊಡತಕ್ಕ ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಾ? ಮತ್ತೆ ಈಗೇನು ತಾವು ಬಾರ್ ಅಸೋಸಿಯೇಷನ್‌ಗೆ ಹಣ ಕೊಡುತ್ತಿದ್ದೀರಿ, ಫಾರ್ ಇಂಪ್ರೂವ್‌ಮೆಂಟ್ ಅಂಡ್

ಪರ್ಚೇಸ್ ಆಫ್ ಲಾ ಬುಕ್ಸ್, ಅದು ಬಹಳ ಮೀಗರ್, ಅದಕ್ಕೆ ಜಾಸ್ತಿ ಮಾಡಬೇಕು. ಸಾಧ್ಯವಾದರೆ ನೀವೇ ಪುಸ್ತಕಗಳನ್ನು ಪರ್ಚೇಸ್ ಮಾಡಿ, ಅವರಿಗೆ ಕೊಡತಕ್ಕಂಥಾದ್ದನ್ನು ಮಾಡಬೇಕು. ಹೈಕೋರ್ಟ್ ಜಡ್ಜ್ ಥೇರ್ಮನ್‌ಶಿಫ್‌ನಲ್ಲಿ ಒಂದು ಪ್ರಾಧಿಕಾರವನ್ನು ರಚನೆ ಮಾಡತಕ್ಕಂಥಾದ್ದು. ವೈಲೇಷನ್ ಆಫ್ ಪ್ರೊಫೆಷನಲ್ ಎಥಿಕ್ಸ್ ಬಗ್ಗೆ ಇದರ ಬಗ್ಗೆ ತಾವು ದಯಮಾಡಿ ಚಿಂತನೆ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುದ್ದಹನುಮೇಗೌಡರು ಜ್ಯುಡಿಷಿಯಲ್ ಸರ್ವೀಸಸ್‌ನಲ್ಲಿ ಇದ್ದವರು. ಪ್ರೊಫೆಷನಲ್ ಮಿಸ್ ಕಾಂಡಕ್ಟ್ ಎಂದು ಹೇಳತಕ್ಕಂಥಾದ್ದು ನೇರವಾಗಿ ನನ್ನ ಇಲಾಖೆಗೆ ಬರುವುದಿಲ್ಲ. Professional mis-connduct on the part of the advocates, ಇದಕ್ಕೆ ಬಾರ್ ಕೌನ್ಸಿಲ್ ಇದೆ. ಈ ಬಾರ್ ಕೌನ್ಸಿಲ್ ಮುಖಾಂತರ ಈ ಕೆಲಸವನ್ನು ಮಾಡಬೇಕಾಗುತ್ತದೆ, ಅವರಿಗಿರತಕ್ಕ ಅಧಿಕಾರವೂ ಕೂಡ ಬಹಳ ಚೆನ್ನಾಗಿದೆ. ಆದರೆ, ಅವರು ಕ್ರಮಬದ್ಧವಾಗಿ, ಕ್ರಮ ಜರುಗಿಸಬೇಕು. Professional mis-conduct on the part of the Judges ಅದು ಹೈಕೋರ್ಟಿಗೆ ಮತ್ತು ಸುಪ್ರೀಂಕೋರ್ಟಿಗೆ ಬಿಟ್ಟಿರತಕ್ಕ ವಿಚಾರ. ಎರಡನೆಯದಾಗಿ, ಬಾರ್ ಅಸೋಸಿಯೇಷನ್‌ಗಳಿಗೆ ಹೆಚ್ಚಿನ ಹಣ ಕೊಡಬೇಕೆಂದು ಹೇಳಿದರು. ಈ ಹಿಂದೆ ತಾಲ್ಲೂಕು ಬಾರ್ ಅಸೋಸಿಯೇಷನ್‌ಗೆ 4 ಸಾವಿರ, ಜಿಲ್ಲಾ ಬಾರ್ ಅಸೋಸಿಯೇಷನ್‌ಗೆ 10 ಸಾವಿರ ಇತ್ತು. ನಾವು ಬಂದಮೇಲೆ ತಾಲ್ಲೂಕು ಬಾರ್ ಅಸೋಸಿಯೇಷನ್‌ಗೆ 10 ಸಾವಿರ ಮತ್ತು ಜಿಲ್ಲಾ ಬಾರ್ ಅಸೋಸಿಯೇಷನ್‌ಗೆ 25 ಸಾವಿರ ಕೊಡುತ್ತಿದ್ದೇವೆ, ಬಾರ್ ಕೌನ್ಸಿಲ್‌ಗೆ 25 ಸಾವಿರ ಕೊಡುತ್ತಿದ್ದರು. ಅದನ್ನು ಒಂದು ಲಕ್ಷಕ್ಕೆ ಏರಿಸಿದ್ದೇವೆ. ಈಗ 10 ಲಕ್ಷ ಇದ್ದುದನ್ನು 23 ಲಕ್ಷಕ್ಕೆ ಏರಿಸಿದ್ದೇವೆ. ಏನೋ ನಮ್ಮ ಹಣಕಾಸಿನ ಮಂತ್ರಿಗಳು ಅವರೂ ವಕೀಲರಾಗಿದ್ದುದರಿಂದ, ನಾನು ಹೋಗಿ ಕೇಳಿದಾಗ 23 ಲಕ್ಷ ರೂ. ಕೊಟ್ಟು ಬಿಟ್ಟರು. ಮುಂದಕ್ಕೆ ಇನ್ನೂ ಸ್ವಲ್ಪ ಜಾಸ್ತಿ ಅಂದರೆ 50 ಲಕ್ಷ ರೂ. ಕೊಡಿ ಎಂದು ಕೇಳುತ್ತೇವೆ. ನೀವೂ ಸ್ವಲ್ಪ ಅವರ ಮೇಲೆ ಒತ್ತಾಯ ತನ್ನಿ. ಅಂದರೆ, ನಾನು ಆ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅವರಿಗೆ ಕೊಡಬೇಕಾಗಿರತಕ್ಕ ಲೈಬ್ರರಿ ಪುಸ್ತಕಗಳು ಯಾವುದಿದೆ, ಅದನ್ನು ನೀವೇ ಕೊಡಿ ಎಂದು ಹೇಳಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ನಾನೂ ಕೂಡ ವಕೀಲನಾಗಿದ್ದೆ, ತಮಗೆ ಗೊತ್ತಿದೆ. ಬಾರ್ ಅಸೋಸಿಯೇಷನ್‌ನಲ್ಲಿ ಅವರಿಗೆ ಬೇಕಾಗಿರತಕ್ಕ 40-50 ಜನ ಕೂಡುವುದಕ್ಕೆ, ನೂರು ಕುರ್ಚಿಗಳಿಗೂ ನಾವು ಹಣ ಕೊಡಬೇಕೇ? ಸೀನಿಯರ್ ಅಡ್ವೊಕೇಟ್ 20 ಜನ ಸೇರಿ, 100 ಕುರ್ಚಿಗಳನ್ನು ಕೊಂಡು, ಒಬ್ಬೊಬ್ಬರು 200 ರೂಪಾಯಿ ಕೊಡುವ ಕೆಲಸ ಮಾಡುವುದಕ್ಕಾಗುವುದಿಲ್ಲವೇ? ಸರ್ಕಾರದಿಂದ ಕೊಡತಕ್ಕ ಹಣ ಯಾವುದಿದೆ, ಅದು ಸ್ವಲ್ಪಮಟ್ಟಿಗೆ ಸಪ್ಲಿಮೆಂಟ್ ಮಾಡಲಿಕ್ಕೆ ಇರತಕ್ಕಂಥಾದ್ದು. ಆದ್ದರಿಂದ ಈ ಪ್ರೊಫೆಷನ್ ಬಗ್ಗೆ ನಿಜವಾಗಿಯೂ ಕಳಕಳಿ ಇರತಕ್ಕವರು ಯಾರಿದ್ದಾರೆ, ಬಾರ್ ಅಸೋಸಿಯೇಷನ್‌ಗೆ ಸ್ವಲ್ಪ ಕಾಂಟ್ರಿಬ್ಯೂಷನ್ ಕೊಟ್ಟು ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅನುದಾನವನ್ನು ಹೆಚ್ಚಿಸುವ ವಿಚಾರದಲ್ಲಿ ಹಣಕಾಸಿನ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿ, ಆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅನೇಕ ಕಡೆ ವಕೀಲರು ಜಾಸ್ತಿಯಾಗಿದ್ದಾರೆ. ಬಾರ್ ಅಸೋಸಿಯೇಷನ್ ಕಟ್ಟಡ ಏನಿದೆ, ಅದರಲ್ಲಿ 20-30 ಅಥವಾ ಕೆಲವು ಕಡೆ 100 ಜನ ಕುಳಿತುಕೊಳ್ಳುವ ಅವಕಾಶ ಇದ್ದರೆ, ಆ ಅಸೋಸಿಯೇಷನ್‌ನಲ್ಲಿ 500 ಜನ ರಿಜಿಸ್ಟ್ರೇಷನ್ ಮಾಡಿ, ಸದಸ್ಯರಾಗಿದ್ದಾರೆ ಕುರ್ಚಿಗಳನ್ನು ಅವರೇ ತಂದು ಕೂಡುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳಬಹುದು. ಆದರೆ, ಅವರು ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲವೆಂದರೆ ಬಹಳ ಕಷ್ಟ. ಗುಲ್ಬರ್ಗಾದಲ್ಲಿರತಕ್ಕ ಪರಿಸ್ಥಿತಿ ತಮಗೂ ಕೂಡ ಗೊತ್ತಿದೆ, ತಾವು ಒಂದುಸಾರಿ ಹೋಗಿ ನೋಡಿದ್ದೀರಿ. ಅಲ್ಲಿ ಸುಮಾರು 400 ಜನ ವಕೀಲರು ಇದ್ದಾರೆ. ಸಾಮಾನ್ಯವಾಗಿ ಅಲ್ಲಿ ಈಗ ಮಾರ್ನಿಂಗ್ ಸೆಷನ್ ನಡೆಯುತ್ತಿದೆ. ಬೆಳಿಗ್ಗೆ 8 ರಿಂದ 1 ಗಂಟೆಯ ವರೆಗೆ ಕೋರ್ಟುಗಳು ಮತ್ತು ಎಲ್ಲಾ ಕಚೇರಿಗಳೂ ನಡೆಯುತ್ತವೆ. ಬಹಳಷ್ಟು ವಕೀಲರು, ಬಿಸಿಲಿನಲ್ಲಿ ಎಲ್ಲಿ ಹೋಗುವುದು ಎಂದು, ಅಲ್ಲಿಯೇ ಒಂದು ಗಂಟೆ ಕಾಲ ಕೆಲವು ಜನ ಲೈಬ್ರರಿಯಲ್ಲಿ ಓದಿಕೊಂಡು ಇರುತ್ತಾರೆ. ಅಥವಾ ಕೆಲವರು ಹಾಲ್‌ನಲ್ಲೇ ಕುರ್ಚಿಗಳನ್ನು ಹಾಕಿಕೊಂಡು ಕುಳಿತಿರುತ್ತಾರೆ. ಇವತ್ತು ಏನಾಗಿದೆ ಎಂದರೆ, ಬಹಳಷ್ಟು ಜನ ಗಿಡದ ಕೆಳಗೆ ಕುಳಿತು, ಅವರು ಕ್ಲೈಂಟ್ಸ್ ಜೊತೆ ಮಾತುಕತೆ ಮಾಡತಕ್ಕಂಥಾದ್ದು, ಕೆಲವು ವ್ಯಾಜ್ಯಗಳನ್ನು ಬಿಡಿಸತಕ್ಕಂಥಾದ್ದು ಆಗುತ್ತಾ ಇದೆ. ಕುರ್ಚಿ ಇಲ್ಲದಿದ್ದರೆ, ಅವರೇ ಕುರ್ಚಿಗಳನ್ನು ತೆಗೆದುಕೊಳ್ಳಲಿ. ಕೆಲವು ಪುಸ್ತಕಗಳನ್ನು ಬೇಕಾದರೆ ಅವರೇ ತೆಗೆದುಕೊಳ್ಳಲಿ. ಆದರೆ, ಬಿಲ್ಡಿಂಗ್‌ಗೋಸ್ಕರವಾದರೂ ಸ್ವಲ್ಪ ಹಣ ಕೊಡತಕ್ಕ ವ್ಯವಸ್ಥೆಯನ್ನು ನೀವು ಮಾಡಬೇಕಲ್ಲಾ. ಅದು ಆಗುತ್ತಲೇ ಇಲ್ಲ. ಮತ್ತು ತಮಗೂ ಕೂಡ, ಯಾದ್‌ಗೀರ್‌ದು ಒಂದು ನಕ್ಷೆ ತಂದುಕೊಟ್ಟೆ. ಅದು ಅಲ್ಲೇ ಹೋಯಿತು. ಗುಲ್ಬರ್ಗಾ ಬಗ್ಗೆ ಕೇಳಿದ್ದೆ. ಅದು ಸ್ವಲ್ಪ ಸುಧಾರಣೆಯಾಗಿದೆ. ಉಳಿದಂತೆ, ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ. ಇದನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಗುಲ್ಬರ್ಗಾದಲ್ಲಿರತಕ್ಕ ಕೋರ್ಟ್ ಕಟ್ಟಡವನ್ನು ನೋಡಿದ್ದೇನೆ. ಅದನ್ನು ಕಟ್ಟಿ ಸಾಧಾರಣ 120 ವರ್ಷಗಳು ಆಗಿದೆ. ಬಹಳ ವರ್ಷಗಳಾಗಿದ್ದರೂ ಕೂಡ, ಆ ಕೋರ್ಟ್ ಕಟ್ಟಡವನ್ನು ಕಟ್ಟಬೇಕೆಂದು ಅವರ ಮನಸ್ಸಿನಲ್ಲಿತ್ತು. ಆದರೆ, ನಾವು ಬಂದಮೇಲೆ, 3 ಕೋಟಿ 20 ಲಕ್ಷ ಇದ್ದುದ್ದನ್ನು 4 ಲಕ್ಷ 40 ಲಕ್ಷ ರೂಪಾಯಿಗಳನ್ನು ಒಟ್ಟುಮಾಡಿ, ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಯಾವುದೋ ಒಂದು ಸಮಾರಂಭಕ್ಕೆ ನಾನು ಹೋದಾಗ, ಅಲ್ಲಿರತಕ್ಕ ಬಾರ್ ಅಸೋಸಿಯೇಷನ್‌ನವರಿಗೆ ಆಶ್ವಾಸನೆ ಕೊಟ್ಟು, ಸರ್ಕಾರಿ ಆಜ್ಞೆಯನ್ನು ಮಾಡಿ ನಾಲ್ಕೂವರೆ ಕೋಟಿ ರೂಪಾಯಿಗಳಲ್ಲಿ ಇವತ್ತು ಅಲ್ಲಿ ಕೋರ್ಟ್ ಕಾಂಪ್ಲೆಕ್ಸ್ ಆಗುತ್ತಾ ಇದೆ. ಬಹುಶಃ ಖರ್ಗೆಯವರು ಮತ್ತು ಅಲ್ಲಿರತಕ್ಕವರೆಲ್ಲರೂ ಸೇರಿ ನಮ್ಮ ಸರ್ಕಾರವನ್ನು ಅಭಿನಂದಿಸಬೇಕು. ಮತ್ತು ಬಾರ್ ಅಸೋಸಿಯೇಷನ್‌ಗೆ, ಕೋರ್ಟ್ ಒಳಗಡೆಯೇ 150 ಜನ ಸದಸ್ಯರು ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿರುತ್ತೇವೆ. ಈ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ. ಮತ್ತು ಎಲ್ಲೆಲ್ಲಿ ಕೋರ್ಟ್ ಇವೆಯೋ ಅಲ್ಲಿ ಬಾರ್ ಅಸೋಸಿಯೇಷನ್‌ಗೆ ಅವಕಾಶ ಇಲ್ಲ. ಅವರು ಬಾರ್ ಅಸೋಸಿಯೇಷನ್‌ಗೆ ಬೇರೆ ಕಟ್ಟಡ ಕಟ್ಟಿಕೊಡಿ ಎಂದು ಕೇಳುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಂಪನ್ಮೂಲಗಳ ಕೊರತೆ ಇರುವುದರಿಂದ ನಾವು ಆ ಕೆಲಸವನ್ನು ಆದ್ಯತೆ ಮೇಲೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ,

ಕೆಲವು ಸಂದರ್ಭದಲ್ಲಿ ನಾವು ಸಂಪನ್ಮೂಲಗಳನ್ನು ಒದಗಿಸಿಕೊಂಡು ನಾವು ಈ ಕೆಲಸವನ್ನು ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಖರ್ಗೆಯವರು ಮಹನೀಯರ ಬಗ್ಗೆ ಕೇಳಿದರು. ಮಹಿಳಾ ವಕೀಲರು ಸುಮಾರು 500ಕ್ಕೂ ಹೆಚ್ಚು ಬೆಂಗಳೂರು ಅಸೋಸಿಯೇಷನ್‌ನಲ್ಲಿ ಇದ್ದಾರೆ. ಒಂದೇ ಒಂದು ರೂಮು, ಒಂದೇ ಒಂದು ಟಾಯ್ಲೆಟ್. ನಾನು, ಅವರ ಗತಿ ಏನಾಗಿರಬೇಕೆಂದು ಕೇಳುತ್ತಾ ಇದ್ದೇನೆ. ಅವರ ಬಗ್ಗೆ ತಾವೇನು ಮಾಡುತ್ತೀರಿ? ಅವರಿಗೆ ಏನಾದರೊಂದು ಸೌಲಭ್ಯ ಕೊಡಲಿಕ್ಕೆ ಪ್ರಯತ್ನಪಡುತ್ತೀರಾ? ಎರಡನೆಯದು ನಾವು ಬರೀ ವಕೀಲರ ಬಗ್ಗೆ ಮಾತನಾಡಿದರೆ ಆಗುವುದಿಲ್ಲ. ಕಕ್ಷಿದಾರರು ಬಂದರೆ, ಅವರು ಅಲ್ಲಿರುವುದಕ್ಕೆ ಸ್ಥಳವಿಲ್ಲ. ಕುಳಿತುಕೊಳ್ಳುವುದಕ್ಕೂ ಸ್ಥಳ ಇಲ್ಲ. ಅವರಿಗೆ ಸ್ಪೆಷಲ್ ಆಗಿ ಒಂದು ಟಾಯ್ಲೆಟ್ ಸೌಲಭ್ಯವೂ ಇಲ್ಲ. ಅವರ ಪಾಡನ್ನು ನೋಡುವುದಕ್ಕಾಗುತ್ತಾ ಇಲ್ಲ. ಆ ವ್ಯವಸ್ಥೆಯನ್ನೂ ತಾವು ಮಾಡಬೇಕಾಗುತ್ತದೆ. ಅದರ ಬಗ್ಗೆ ಏನು ಗಮನಹರಿಸುತ್ತೀರಿ? ಇವತ್ತು ಸುಪ್ರೀಂ ಕೋರ್ಟಿನಲ್ಲಿ ಒಂದು ವ್ಯವಸ್ಥೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ನಾವು, ಅವರು ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆಯೇ, ವಜಾ ಆಗಿದೆಯೇ ಅಥವಾ ಯಾವ ಸ್ಟೇಜ್‌ನಲ್ಲಿದೆ ಎಂಬುದನ್ನು ಬೆಂಗಳೂರಿನಲ್ಲಿಯೇ ಕಂಪ್ಯೂಟರ್‌ನಿಂದ ತಿಳಿದುಕೊಳ್ಳಬೇಕು. ಆ ವ್ಯವಸ್ಥೆಯನ್ನು ತಾವು ಬೆಂಗಳೂರಿನ ಹೈಕೋರ್ಟ್‌ನಲ್ಲಿ ಮಾಡಬೇಕು. ಎಲ್ಲಾ ಬಾರ್ ಕೌನ್ಸಿಲ್‌ಗಳಿಗೆ ಈ ವ್ಯವಸ್ಥೆಯನ್ನು ಕೊಟ್ಟರೆ, ಅಲ್ಲಿರತಕ್ಕ ಕಕ್ಷಿದಾರರು ಮತ್ತು ವಕೀಲರು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಹೈಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆಯೇ, ಯಾವ ಸ್ಟೇಜ್‌ನಲ್ಲಿದೆ, ವಜಾ ಆಯಿತೇ, ಅಡ್ಮಿಷನ್ ಆಯಿತೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬಹುದು. ಆ ವ್ಯವಸ್ಥೆಯನ್ನು ಏನಾದರೂ ಮಾಡುತ್ತೀರಾ ಎಂದು ಈ ಸಂದರ್ಭದಲ್ಲಿ ನಾವು ಕೇಳಿಕೊಳ್ಳುತ್ತೇನೆ. ಮತ್ತೆ ಪ್ರತಿಯೊಂದು ಬಾರ್ ಅಸೋಸಿಯೇಷನ್‌ಗೆ ಒಂದೊಂದು ಕಂಪ್ಯೂಟರನ್ನು ತಾವು ಒದಗಿಸಿಕೊಟ್ಟರೆ ಕಂಪ್ಯೂಟರ್ ಲೈಬ್ರರಿ ಮಾಡಬಹುದು. ಈ ಲೈಬ್ರರಿ ಮಾಡುವುದರಿಂದ ಬಹಳ ಜನಕ್ಕೆ ಅನುಕೂಲವಾಗುತ್ತದೆ ಅದನ್ನು ಏನಾದರೂ ವ್ಯವಸ್ಥೆ ಮಾಡುತ್ತೀರಾ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಒಟ್ಟಾರೆ ಎಲ್ಲಾ ಸೇರಿ ಅವರು ಸರ್ಕಾರದ ಮೇಲೆ ಹಾಕಿಬಿಟ್ಟರು. 500 ಜನ ಮಹಿಳಾ ವಕೀಲರು ಇದ್ದಾರೆ ನಿಜ. ನಾವು ಮಹಿಳೆಯರ ಬಗ್ಗೆ ಅನುಕಂಪ ತೋರಿಸಲೇ ಬೇಕಾಗುತ್ತದೆ, ಆ ಕೆಲಸವನ್ನು ಮಾಡಲೇಬೇಕಾಗುತ್ತದೆ. ಅವರ ಕಷ್ಟವನ್ನೂ ನಾನು ನೋಡಿದ್ದೇನೆ. ಬಹುಶಃ ಅದರ ಬಗ್ಗೆ ಏನು ಚಿಂತನೆ ಮಾಡಬೇಕೋ ಅದನ್ನು ನಾವು ಮಾಡೋಣ. ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಸುಮಾರು 500-600 ಜನ ಕಳುಹಿಸಿದ್ದೇವೆ. ಮತ್ತು ಅವರ ಬಗ್ಗೆ ಏನು ಮಾಡಬೇಕೆಂದು ಹೇಳುತ್ತಾ ಇರತಕ್ಕಂಥಾದ್ದು. ಅಂದರೆ, ನಾನು ಒಂದು ವಿಚಾರ ಹೇಳುತ್ತೇನೆ. ಬಾರ್ ಅಸೋಸಿಯೇಷನ್‌ಗೆ ನಾವು ಕೊಡುತ್ತಿರತಕ್ಕ ಹಣ ಯಾವುದಾದರೂ ಇದ್ದರೆ, ಸಂಪನ್ಮೂಲಗಳನ್ನು ನೋಡಿಕೊಂಡೇ ನಾವು ಹಣ ಕೊಡಬೇಕು. ನಾವು ಅದಕ್ಕೆ ಆದ್ಯತೆ ಮೇಲೆ ಹಣ ಕೊಡುವುದಕ್ಕಾಗುವುದಿಲ್ಲ. ಇದನ್ನು ನಾನು ನೇರವಾಗಿ ಹೇಳುತ್ತೇನೆ. ಆದರೆ, ಎಲ್ಲೆಲ್ಲಿ ನಾವು ಹೊಸ ಕೋರ್ಟ್ ಕಾಂಪ್ಲೆಕ್ಸ್‌ಗಳನ್ನು ಕಟ್ಟುತ್ತಾ ಇದ್ದೇವೆ, ಅಲ್ಲೆಲ್ಲಾ ಬಾರ್ ಅಸೋಸಿಯೇಷನ್

ವ್ಯವಸ್ಥೆಗೆ ಪ್ರಾವಿಷನ್ ಮಾಡಿದ್ದೇನೆ. ಆದ್ದರಿಂದ, ಹೊಸ ಕೋರ್ಟ್ ಕಾಂಪ್ಲೆಕ್ಸ್ ಎಲ್ಲೆಲ್ಲಿ ಆಗುತ್ತಿದೆ, ಅಲ್ಲಿ ಈ ತರಹ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲ. ಆದರೆ, ಹಳೇ ಕೋರ್ಟ್ ಕಟ್ಟಡಗಳಿರುವ ಕಡೆಗಳಲ್ಲಿ ಬಾರ್ ಅಸೋಸಿಯೇಷನ್‌ಗೆ ಈ ಪರಿಸ್ಥಿತಿ ಬಂದಿದೆ. ಎರಡನೆಯದಾಗಿ ಕಕ್ಷಿದಾರರಿಗೆ ಸ್ಥಳ ಮತ್ತು ಕೂಡುವುದಕ್ಕೆ ಅವಕಾಶ ಮಾಡತಕ್ಕಂಥಾದ್ದನ್ನು ಹೇಳಿದ್ದೀರಿ. ಕೆಲವು ಸಂದರ್ಭದಲ್ಲಿ ಕೋರ್ಟ್ ಆವರಣದೊಳಗೇ ಈ ಕೆಲಸ ಮಾಡಬೇಕೆಂಬ ಯೋಚನೆ ಮಾಡುತ್ತಾ ಇದ್ದೇವೆ. ನಾವು ನೋಡಿದ್ದೇವೆ, ರಾಜ್ಯ ಉಚ್ಚನ್ಯಾಯಾಲಯದಲ್ಲಿ ಇದರ ಬಗ್ಗೆ ಯಾವುದೋ ಒಂದು, ಸ್ವಲ್ಪಮಟ್ಟಿಗೆ ಆಚೆಕಡೆ, ಈಚೆ ಕಡೆ ವಾದ ವಿವಾದ ನಡೆಯುತ್ತಾ ಇದೆ. ಈ ವಾದ ವಿವಾದಕ್ಕೆ ನಾನು ಕೈ ಹಾಕುವುದಿಲ್ಲ ಬಹುಶಃ ಆ ಮಟ್ಟದಲ್ಲೇ ಅವರು ಪರಿಹರಿಸಿಕೊಳ್ಳಬೇಕಾಗುತ್ತೆ ಮತ್ತು ಇನ್ನೊಂದು ತಾವೇನು ಹೇಳಿದ್ದೀರಿ. ಈ ಕಂಪ್ಯೂಟರ್ ಸಿಸ್ಟಂನ್ನು ಸರ್ಕಾರದ ವತಿಯಿಂದ ಬಾರ್ ಅಸೋಸಿಯೇಷನ್‌ಗೆ ಕೊಡುವುದಕ್ಕಾಗುವುದಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲಿರತಕ್ಕ ವಕೀಲರು ಯಾರಿದ್ದಾರೆ, ಅವರೆಲ್ಲಾ ಸೇರಿಕೊಂಡು, 2-3 ಸಾವಿರ ಹಾಕಿಕೊಂಡು ಒಂದು ಕಂಪ್ಯೂಟರನ್ನು ಖರೀದಿ ಮಾಡಿಕೊಳ್ಳಬಹುದು. ಬಹುಶಃ ಒಂದು ಕಂಪ್ಯೂಟರ್ 30-40 ಸಾವಿರ ಆಗಬಹುದು. ಲಾಯರುಗಳು, ಕಕ್ಷಿದಾರರಿಂದ ಚಂದ ಪಡೆಯತಕ್ಕ ಫೀಜು ಯಾವುದಿದೆ, ಅದನ್ನು ಅವರ ಸಹಕಾರಕ್ಕೋಸ್ಕರ, ಸೌಲಭ್ಯಕ್ಕೋಸ್ಕರ ಸ್ವಲ್ಪಮಟ್ಟಿಗೆ ಮಾಡಿಕೊಂಡರೆ ಅನುಕೂಲವಾಗುತ್ತದೆ. ಇವತ್ತು ನಾನು ಹೇಳುತ್ತೇನೆ. ಬಾರ್ ಅಸೋಸಿಯೇಷನ್‌ಗೆ ನಾವು ಕೊಡುವ 25 ಸಾವಿರ ಅಲ್ಲದೇ, ಜಿಲ್ಲಾ ಬಾರ್ ಅಸೋಸಿಯೇಷನ್‌ಗೆ ನಾವು ಕೊಡುವ 25 ಸಾವಿರ, ಇದಲ್ಲದೆ ಅವರು ತಿಂಗಳಿಗೆ 10 ಸಾವಿರ ರೂಪಾಯಿ ಹಾಕಿ, ಒಂದು ಕೆಲಸವನ್ನೂ ಮಾಡುತ್ತಾ ಇಲ್ಲ. ಏಕೆ ಮಾಡುವುದಿಲ್ಲ ಹೇಳಿ. ನಾನೇನೋ ಬಾರ್ ಅಸೋಸಿಯೇಷನ್‌ಗೆ ಹಣ ಕೊಡಲಿಕ್ಕೆ, ಮಾನ್ಯ ಹಣಕಾಸಿನ ಸಚಿವರನ್ನು ಕೇಳಬಲ್ಲೆ. ಆದರೆ, ಅವರು ಹೇಳಿದಂತೆ, ಎಲ್ಲಾ ವಿಚಾರವನ್ನೂ ನನ್ನ ಮೇಲೆಯೇ ಹೊರಿಸಬೇಡಿ. ಅಲ್ಲಿರತಕ್ಕ ವಕೀಲರಿಗೂ ಜವಾಬ್ದಾರಿ ಇದೆ. ಆ ಕೆಲಸವನ್ನು ಅವರು ಮಾಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ಕಂಪ್ಯೂಟರ್ ತೆಗೆದುಕೊಳ್ಳುವುದು ಹೆಚ್ಚಲ್ಲ. ಮಾನಿಟರಿಂಗ್ ಇಲ್ಲಿಂದ ಡೌನ್‌ವರ್ಡ್ ಮಾಡಬೇಕಾದರೆ, ಫೀಡ್ ಮಾಡಬೇಕಲ್ಲಾ. ಸೆಂಟ್ರಲ್ ಕಂಪ್ಯೂಟರ್ ಸಿಸ್ಟಂಮಾಡಿದರೆ, ಲೋಕಲ್‌ಬಾರ್ ಅಸೋಸಿಯೇಷನ್ನಿನವರು ತೆಗೆದುಕೊಳ್ಳುವುದ -ಕ್ಕಾಗುತ್ತದೆ. ಆ ಸಿಸ್ಟಂ, ಇಂಟರ್‌ನೆಟ್ ಸಿಸ್ಟಂ ಮಾಡಬೇಕಲ್ಲಾ. ಆ ಸಂಪರ್ಕ ನೀವು ಕೊಡದೇ ಇದ್ದರೆ, ಬಾರ್ ಅಸೋಸಿಯೇಷನ್‌ನಲ್ಲಿ ಕಂಪ್ಯೂಟರ್ ಕೊಂಡುಕೊಂಡರೂ ಉಪಯೋಗವಾಗುವುದಿಲ್ಲ. ಆದ್ದರಿಂದ, ನೀವು ಸೆಂಟ್ರಲ್ ಮಾನಿಟರಿಂಗ್ ವ್ಯವಸ್ಥೆಯನ್ನು ಮಾಡಬೇಕು.

ಅಧ್ಯಕ್ಷರು : ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ. ಪ್ರಶ್ನೋತ್ತರದ ಅವಧಿಯಲ್ಲಿ ಏಕೆ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸ್ಟೈಫಂಡ್‌ನ್ನು ಆರ್ಥಿಕವಾಗಿ ಹಿಂದುಳಿದ ಎಲ್ಲಾ ಯುವ ವಕೀಲರಿಗೂ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. That is another way of improving the standard of legal profession.

ಶ್ರೀ ಎಂ.ಸಿ. ನಾಣಯ್ಯ : ಇವರಿಗೆ ಕಂಪ್ಯೂಟರ್ ಕೊಟ್ಟಮೇಲೆ, ಅದನ್ನು ಮಾನಿಟರ್ ಮಾಡುವವರು ಯಾರು ಎಂದು. That monitoring work you should do. You should get the information from the High Court or the District Court. As far as the Government is concerned, we don't have information at all as to which cases have been filed and which cases have been disposed of. This information you should get it from the High Court or the District court. I don't have that information with me.

ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡವರ ಸಂಖ್ಯೆ.

380 - ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಉದ್ಯೋಗ ವಿನಿಮಯ ಕೇಂದ್ರಗಳಿವೆ.*

ಆ) *ಇವುಗಳಲ್ಲಿ ಇಲ್ಲಿಯವರೆಗೆ ನೋಂದಾಯಿಸಿಕೊಂಡವರ ಸಂಖ್ಯೆ ಎಷ್ಟು?*

ಇ) *ಜನವರಿ 1997ರಿಂದ ಡಿಸೆಂಬರ್‌ರವರೆಗೆ ಒಟ್ಟು ಎಷ್ಟು ಜನರಿಗೆ ಈ ಉದ್ಯೋಗ ವಿನಿಮಯ ಕೇಂದ್ರಗಳಿಂದ ಉದ್ಯೋಗ ದೊರತಿದೆ?*

ಈ) *ರಾಜ್ಯದ ಹಲವಾರು ಸರ್ಕಾರಿ ಇಲಾಖೆಗಳು, ರಾಜ್ಯ ಸ್ವಾಮ್ಯದ ಕೈಗಾರಿಕೆಗಳು ವಿಶ್ವವಿದ್ಯಾಲಯಗಳು ನೇರವಾಗಿ ಅರ್ಜಿಗಳನ್ನು ಕರೆದು ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದ್ದಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೊಂದಾಯಿಸಿರುವರಿಗೆ ತೊಂದರೆಯಾಗಿಲ್ಲವೆ?*

ಊ) *ಹಾಗಿದ್ದಲ್ಲಿ, ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದ್ದಾರೆಯೇ?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) 6

ಆ) ದಿನಾಂಕ : 31.3.98ರ ಅನ್ವಯ ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ 4,68,263.

ಇ) 5,762.

ಈ) ಹೌದು.